


ಸಂಪಾದಕೀಯ

# ಮಕ್ಕಳ ಕಲಿಕೆ – ಹೆತ್ತವರ ಕರ್ತವ್ಯ

‘‘**ನೋ**ಡು ಮಗೂ, ನೀನು ಚೆನ್ನಾಗಿ ಓದು. ಮುಂದೆ ಡಾಕ್ಟರ್ ಆಗಬೇಡವೆ ?’’

‘‘ಇಲ್ಲಮ್ಮಾ, ನಾನು ಡಾಕ್ಟರ್ ಆಗಲಾರೆ. ನಾನು ಕ್ರಿಕೆಟ್ ಆಟಗಾರನಾಗುತ್ತೇನೆ.’’

‘‘ಅದೇಕೋ ಹಾಗಂತೀಯ? ನಾಳೆ ನೀನು ದೊಡ್ಡ ಉದ್ಯೋಗ ಹಿಡಿದು ಹಣ ಸಂಪಾದಿಸಬೇಡವೆ? ಏನೇನೋ ತಲೆಯಲ್ಲಿ ತುಂಬಿಕೊಂಡ್ಡೀಯಾ.’’

‘‘ಇಲ್ಲಮ್ಮಾ, ನನಗೆ ಅದೆಲ್ಲ ಇಷ್ಟವಿಲ್ಲ.’’

ಮಕ್ಕಳು ಏನು ಹೇಳಿದರೂ ಕೇಳುವುದಿಲ್ಲ. ಓದು ಬರಹ ಬೇಕಾಗಿಲ್ಲ. ಟಿ.ವಿ, ಮೊಬೈಲ್ ಬಿಟ್ಟರೆ ಬೇರೆ ಜಗತ್ತೇ ಇಲ್ಲ. ಇನ್ನು ಮುಂದೆ ಇವನ ಬೆಳವಣಿಗೆ ಹೇಗಾಗುವುದೋ ! ಸರಿಯಾಗಿ ವಿದ್ಯಾಭ್ಯಾಸ ನಡೆಯದಿದ್ದರೆ ಮುಂದೆ ಇವನ ಜೀವನ ಹೇಗೆ? ತಾಯಿಗೆ ಆತಂಕವಾಗುವುದು. ಎಷ್ಟು ಸಲ ಹೇಳಿದರೂ ಮಗನದ್ದು ಒಂದೇ ರಾಗ. ಇದಕ್ಕೇನು ಮಾಡಬೇಕು – ಎಂದು ತಿಳಿಯದೆ ಚಿಂತೆ ಆರಂಭವಾಗುತ್ತದೆ.

ಇದು ಒಬ್ಬಿಬ್ಬರು ತಾಯಂದಿರ ಕಥೆಯಲ್ಲ; ಎಲ್ಲ ಮನೆಗಳ ಕಥೆ. ಮಕ್ಕಳು ಹೀಗೆಯೇ ಬೆಳೆಯಬೇಕು. ನಾವು ಬಯಸಿದಂತೆಯೇ ಡಾಕ್ಟರ್, ಇಂಜಿನಿಯರ್ ಅಥವಾ ಇನ್ನೊಂದು ಆಗಬೇಕು. ಹೇರಳ ಸಂಪಾದನೆ ಮಾಡಿ ದೊಡ್ಡ ವ್ಯಕ್ತಿಯಾಗಬೇಕು ಎಂದು ಬಯಸುತ್ತಾರೆ. ಆದರೆ ಆ ಕನಸುಗಳೆಲ್ಲ ಅವರ ಕಣ್ಣೆದುರೇ ನೀರಾಗುತ್ತದೆ. ಮಗ ಇದಾವುದಕ್ಕೂ ಗಮನ ಕೊಡದೆ ಒಬ್ಬ ಕಲಾವಿದನಾಗುತ್ತಾನೆ. ಅಥವಾ ಒಂದು ಅಂಗಡಿ ತೆರೆದು ವ್ಯಾಪಾರ ಮಾಡುತ್ತಾನೆ. ಹಲವು ಉದಾಹರಣೆಗಳಲ್ಲಿ ಏನೂ ಕೆಲಸಕ್ಕೆ ಬಾರದ ‘ನಿರುಪಯೋಗಿ’ ಎನ್ನಿಸಿಕೊಳ್ಳುತ್ತಾನೆ. ಎಲ್ಲೋ ಅಪರೂಪಕ್ಕೆ ಕೆಲವರು ಹೆತ್ತವರ ಆಶಯಕ್ಕೆ ಅನುಗುಣವಾಗಿ ಕಲಿತು, ಉತ್ತಮ ಪದವಿ ಪಡೆದುಕೊಳ್ಳುತ್ತಾರೆ. ಎಲ್ಲ ಮೀರಿ ನಿಂತು, ಹಿರಿಯರ ನಿರೀಕ್ಷೆಗೂ ಮೀರಿ ಸಾಧನೆ ಮಾಡುವವರು ವಿರಳವೇ ಎನ್ನಬೇಕು. ಹೆತ್ತವರ ಆತಂಕ, ಒತ್ತಡ ಹಾಗೂ ಬೈಗುಳ ಒಂದೆಡೆ; ಮಕ್ಕಳ ಒಲವು-ಆಕರ್ಷಣೆ ಇನ್ನೊಂದೆಡೆ; ಮುಂದೆ ಜೀವನದ ಹೋರಾಟದಲ್ಲಿ ಮುಳುಗೆದ್ದು ಎದುರಿಸುವ ಸಂಘರ್ಷಗಳು ಮತ್ತೊಂದೆಡೆ. ಇವುಗಳ ನಡುವೆ ಸರಿಯಾದ ಮಾರ್ಗ, ಸಹಜವಾದ ವಿಧಾನ ಎಂಬುದೊಂದು ಇಲ್ಲವೆ? ಮಕ್ಕಳು ಅತ್ಯಂತ ಉತ್ತಮ ರೀತಿಯಲ್ಲಿ ಬೆಳೆಯುವ ರೀತಿ ಯಾವುದು? – ಈ ಎಲ್ಲ ಪ್ರಶ್ನೆಗಳು ಉದ್ಭವಿಸುತ್ತವೆ.

## ಕಟ್ಟಿಕೊಳ್ಳುವ ಗುರಿ

ಎಲ್ಲರಿಗೂ ತಮ್ಮ ಮಕ್ಕಳು ಅತ್ಯುತ್ತಮವಾಗಿ ಬೆಳೆಯಬೇಕೆನ್ನುವ ಹಂಬಲ ಇದ್ದೇ ಇರುತ್ತದೆ. ಅದಕ್ಕಾಗಿ ಅತ್ಯುತ್ತಮ ಶಾಲೆ – ಅದೆಷ್ಟೇ ಖರ್ಚಾಗಲಿ, ಪರವಾಗಿಲ್ಲ – ಅತ್ಯುತ್ತಮ ಶಿಕ್ಷಣ ಕೊಡಿಸಬೇಕು. ಅತ್ಯುತ್ತಮ ಉದ್ಯೋಗ ಹಿಡಿಯಬೇಕು; ಚೆನ್ನಾಗಿ ಸಂಪಾದಿಸಿ, ಜೀವನ ಸುಗಮವಾಗಬೇಕು. ಇದು ಎಲ್ಲರ ಬಯಕೆ. ಆದರೆ ಈ ಹಂಬಲದ ಭರದಲ್ಲಿ ಮಕ್ಕಳ ಸಹಜ ಬೆಳವಣಿಗೆಗೆ ಅಡ್ಡಿಯಾಗಬಹುದಾದ ರೀತಿ ಒತ್ತಡ ಹಾಕುವುದು ಎಲ್ಲೆಡೆ ಕಂಡು ಬರುತ್ತದೆ. ರ‍್ಯಾಂಕ್ ಗಳಿಕೆ, ೯೦% ಅಂಕ ಇತ್ಯಾದಿ ಗುರಿ ಹಾಕಿ ಕೊಟ್ಟು, ಅದಕ್ಕಾಗಿ ಅಧ್ಯಯನ ಮಾಡುವ ಹಾಗೂ ಒತ್ತಡ ಹಾಕುವ ವಿಧಾನದಿಂದಾಗಿ ವಿದ್ಯಾರ್ಥಿಗಳ ಸಹಜ ಆಸಕ್ತಿ ಕುಂಠಿತವಾಗುತ್ತದೆ. ಅಂಕ ಗಳಿಕೆ, ರ‍್ಯಾಂಕ್ ಗಳಿಕೆ ಮಾತ್ರವೇ ಗುರಿ ಎಂದಾದರೆ, ಕಲಿಯುವ ವಿಷಯಗಳಲ್ಲಿ ಆಸಕ್ತಿ ಮೂಡುವುದು ಹೇಗೆ? ವಿಷಯಗಳಲ್ಲಿ ಆಸಕ್ತಿ ಮೂಡಿಸುವ ಬಗೆ ಹೇಗೆ ಎಂದು ಅರಿತಲ್ಲದೆ, ವಿದ್ಯಾರ್ಥಿಗಳಿಗೆ ಕಲಿಯುವ ವಿಧಾನವನ್ನು ಕಲಿಸಲಾಗದು. ಹೆತ್ತವರು ಗಮನ ಕೊಡಬೇಕಾದ ಪ್ರಮುಖ ಅಂಶವೇ ಇದು. ಎಷ್ಟು ಅಂಕ ಗಳಿಸಿದೆ ಎಂಬುದಕ್ಕಿಂತ, ವಿಷಯವನ್ನು ಎಷ್ಟು ಚೆನ್ನಾಗಿ ಅರ್ಥಮಾಡಿಕೊಂಡೆ – ಇದು ಮುಖ್ಯವಾದ ಅಂಶ. ಕಲಿಯಬೇಕಾದ ವಿಷಯದಲ್ಲಿ ಆಸಕ್ತಿ ಹುಟ್ಟಿಸಿಬಿಡಬೇಕು; ಇಷ್ಟಾದರೆ, ಮುಂದೆ ಮಕ್ಕಳು ತಾವಾಗಿಯೇ ಅದನ್ನು ಅರಿತುಕೊಳ್ಳಬಲ್ಲರು; ಅಂಕ-ರ‍್ಯಾಂಕ್ ಎಲ್ಲವೂ ಅದರ ಉಪ-ಉತ್ಪನ್ನವಾಗಿ ಬಂದರೆ ಬರಲಿ. ಬಾರದೆ ಹೋದರೆ ಅದರಿಂದ ಕಳೆದುಕೊಳ್ಳಬೇಕಾದದ್ದು ಕಡಿಮೆ. ಈ ಬಗೆಯ ತರಬೇತಿ ಮುಖ್ಯ.

ಹೆತ್ತವರು ಮಕ್ಕಳ ಮುಂದೆ ಕಟ್ಟಿಕೊಡುವ ಗುರಿಯೇ ದೋಷಪೂರಿತವಾಗಿದ್ದರೆ, ಮಕ್ಕಳ ಬೆಳವಣಿಗೆಯೂ ಅಷ್ಟೇ ಕುಂಠಿತವಾಗುವುದು, ಅವರು ಹಲವು ಬಗೆಯ ತೊಂದರೆಗಳಿಂದ ಬಳಲುವರು. ಡಾಕ್ಟರ್, ಇಂಜಿನಿಯರ್, ಸರ್ಕಾರಿ ಆಫೀಸರ್

ಮುಂತಾದ ಗುರಿ ಕಟ್ಟಿಕೊಡುವ ಬದಲು, 'ನಿನಗೆ ಆಸಕ್ತಿಯಿರುವ ಯಾವ ಮಾರ್ಗವನ್ನಾದರೂ ಹಿಡಿಯಪ್ಪ; ಆದರೆ ಉತ್ಸಾಹ ದಿಂದ, ಪೂರ್ಣ ಮನಸ್ಸಿನಿಂದ ಕಲಿ' ಎಂದು ಮಕ್ಕಳನ್ನು ಹುರಿ ದುಂಬಿಸುವುದು ಉತ್ತಮ.

## ಭಾವನೆಯ ಸ್ವಾತಂತ್ರ್ಯ

ಮಕ್ಕಳ ಮನಸ್ಸು ತಿಳಿಯಾದ ಆಗಸವಿದ್ದಂತೆ. ಅಲ್ಲಿ ಬಗೆ ಬಗೆಯ, ಬಣ್ಣಬಣ್ಣದ ಮೋಡಗಳು ಏಳುತ್ತಿರುತ್ತವೆ – ಕನಸುಗಳ ರೂಪ ತಾಳುತ್ತವೆ. ಸುತ್ತಣ ಪ್ರಪಂಚದಲ್ಲಿ ಯಾವುದೋ ಕೆಲವು ಅಂಶಗಳು ಅವರ ಮನಸ್ಸನ್ನು ಆಕರ್ಷಿಸುತ್ತವೆ; ಆ ದಿಕ್ಕಿನಲ್ಲಿ ಹರಿದು ಆಸಕ್ತಿಯನ್ನು ಹೆಚ್ಚಿಸಿಕೊಳ್ಳುತ್ತದೆ. ಮಕ್ಕಳ ಬೆಳವಣಿಗೆ ಆರೋಗ್ಯಕರವಾಗಿರಬೇಕಿದ್ದರೆ, ಅವು ಸ್ವತಂತ್ರವಾಗಿ ಚಿಂತಿಸ ಬೇಕು; ಸ್ವತಂತ್ರವಾಗಿ ಭಾವಿಸಿಕೊಳ್ಳಲು ಬಿಡಬೇಕು. ಎಷ್ಟೋ ಮಂದಿ ಹೆತ್ತವರು ಮಕ್ಕಳನ್ನು ಒಳ್ಳೆಯ ಸಂಗೀತ ತರಗತಿಗೆ ಸೇರಿಸುತ್ತಾರೆ. ಮುಂದೆ ನನ್ನ ಮಗ ಅಥವಾ ಮಗಳು ಒಳ್ಳೆಯ ಸಂಗೀತ ಕಲಾವಿದರಾಗುವ ಬಯಕೆ ಅವರದು. ಅವರಿಗೇನೋ ಆಸಕ್ತಿ, ಉತ್ಸಾಹ. ಆದರೆ ಮಕ್ಕಳಿಗೆ? ಯಾವ ಆಸಕ್ತಿಯೂ ಇಲ್ಲ. ಕೆಲವೇ ದಿನಗಳಲ್ಲಿ ಅವರ ಕಲಿಕೆ ನಿಂತುಹೋಗುತ್ತದೆ. ಆದರೆ ಸಹಜವಾಗಿ ಆಸಕ್ತಿಯಿರುವ ಮಕ್ಕಳನ್ನು ಸಂಗೀತ ಶಾಲೆಗೆ ಹಾಕಿ ದರೆ, ಅವರ ಬೆಳವಣಿಗೆಯೂ ಸಹಜವಾಗಿ ನಡೆಯುತ್ತದೆ. ಈ ರೀತಿಯ ಬೆಳವಣಿಗೆಯನ್ನು ಎಲ್ಲ ಕ್ಷೇತ್ರಕ್ಕೂ ಅನ್ವಯಿಸಬೇಕು. ಮಕ್ಕಳಿಗೆ ಯಾವ ವಿಷಯದಲ್ಲಿ ಅಥವಾ ಕೇತ್ರದಲ್ಲಿ ಆಸಕ್ತಿ ಮೂಡುವುದೋ ಮೂಡಲಿ; ಆ ದಿಕ್ಕಿನಲ್ಲಿ ಅವುಗಳು ತಮ್ಮ ಕಲ್ಪನೆ, ಭಾವನೆ, ಅರಿವನ್ನು ಹರಿಸುತ್ತ ಹೋಗಲಿ. ಅನೇಕ ವೇಳೆ ಇಂತಹ ಆಸಕ್ತಿಗಳು ಒಳ್ಳೆಯ ಉದ್ಯೋಗ ನೀಡಲಾರವು. ಸಂಪಾ ದನೆಯ ಮಾರ್ಗವಾಗದೆ ಹೋಗಬಹುದು. ಅಂತಹ ಸಂದರ್ಭ ದಲ್ಲಿ 'ನಿನ್ನ ಉದ್ಯೋಗ ಬೇರೆ, ಆಸಕ್ತಿ ಬೇರೆ; ಒಂದು ಜೀವನದ ಆವಶ್ಯಕತೆ, ಇನ್ನೊಂದು ನಿನ್ನ ಹೃದಯಕ್ಕೆ ಹತ್ತಿರದ ವಿಷಯ. ಎರ ಡನ್ನೂ ಬೆಳೆಸಿಕೋ' ಎಂದು ಅವೆರಡರ ವ್ಯತ್ಯಾಸವನ್ನು ತಿಳಿಯ ಹೇಳುವುದು ಅಗತ್ಯ. ಜೀವನದಲ್ಲಿ ಅನಿವಾರ್ಯವಾದ ಅನೇಕ ಸಂಗತಿಗಳ ನಡುವೆ, ನಮ್ಮ ಆಸಕ್ತಿದಾಯಕ ಅಂಶಗಳು ಬದುಕಿಗೆ ತಂಪೆರೆಯುತ್ತವೆ. ಇವೆರಡರ ಸಮತೋಲನ ಬಾಲ್ಯದಿಂದಲೇ ಬೆಳೆಯುತ್ತ ಬಂದರೆ, ಅದು ಉತ್ತಮ ದೈಹಿಕ-ಮಾನಸಿಕ ಬೆಳ ವಣಿಗೆಗೆ ಸಹಕಾರಿಯಾಗುತ್ತದೆ.

## ಪಾಲಕರ ನಿರ್ವಹಣೆ

ಮಕ್ಕಳ ಬೆಳವಣಿಗೆ, ವಿದ್ಯಾಭ್ಯಾಸಗಳ ಬಗ್ಗೆ ಈ ರೀತಿಯ ಕಾಳಜಿ ವಹಿಸಲು ಪಾಲಕರಿಗೂ ಸರಿಯಾದ ತರಬೇತಿ ಬೇಡವೆ? ಎಷ್ಟೋ ಮನೆಗಳಲ್ಲಿ ಹೆತ್ತವರಿಗೆ ಇದನ್ನೆಲ್ಲ ಗಮನಿಸಿ ನಿರ್ವಹಿ ಸಲು ಸಮಯವಾದರೂ ಎಲ್ಲಿ? ತಂದೆ-ತಾಯಿ ಇಬ್ಬರೂ ದುಡಿಯುತ್ತಾರೆ. ಮನೆಗೆ ಬಂದ ಕೂಡಲೇ ಸುಸ್ತಾಗಿಬಿಡುತ್ತಾರೆ. ಮಕ್ಕಳ ಬಗ್ಗೆ ಗಮನ ಕೊಡುವುದು ಯಾವಾಗ? ಅನೇಕ ಮಂದಿ ಹೆತ್ತವರಿಗೆ ಮಕ್ಕಳ ತರಬೇತಿಯ ಬಗ್ಗೆ ಹೆಚ್ಚಿನ ತಿಳುವಳಿಕೆಯೂ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಏನು ಮಾಡಬೇಕು?

ಸಮಾಜದಲ್ಲಿ ಎಷ್ಟೋ ಬದಲಾವಣೆಗಳು ಅನಿವಾರ್ಯ ವಾಗಿ ನಡೆಯುತ್ತಿರುತ್ತವೆ. ಇದಕ್ಕೆ ಅನುಗುಣವಾಗಿ ಕುಟುಂಬ, ವಿದ್ಯಾಭ್ಯಾಸ, ಉದ್ಯೋಗ – ಹೀಗೆ ಎಲ್ಲ ಹಂತಗಳಲ್ಲೂ ಏರು ಪೇರಾಗುತ್ತವೆ. ಆದರೆ ಕೆಲವು ವಿಷಯಗಳನ್ನು ಗಮನದಲ್ಲಿಟ್ಟು ಕೊಂಡರೆ, ಎಂತಹ ಪರಿಸ್ಥಿತಿಯಲ್ಲೂ ಹೆಚ್ಚಿನ ಗೊಂದಲವುಂಟಾಗ ದಂತೆ ಮಕ್ಕಳ ವಿದ್ಯಾಭ್ಯಾಸ-ಬೆಳವಣಿಗೆಯನ್ನು ಹೆತ್ತವರು ಸಮರ್ಥವಾಗಿ ನಿರ್ವಹಿಸಬಹುದು.

೧) ಮಕ್ಕಳ ಬೆಳವಣಿಗೆ ಎಲ್ಲಕ್ಕಿಂತ ಮುಖ್ಯ ಎಂಬ ಅರಿವು.

೨) ಬೆಳವಣಿಗೆಯ ಹಂತದಲ್ಲಿ ಮಕ್ಕಳ ಬಗ್ಗೆ ನಿಜವಾದ ತರಬೇತಿ ಕೊಡಬಲ್ಲವರು ಹೆತ್ತವರು ಮಾತ್ರ ಎಂಬ ಜವಾಬ್ದಾರಿ.

೩) ಮಕ್ಕಳ ಆದರ್ಶ, ಆಶೋತ್ತರಗಳನ್ನು ಅವರ ಆಸಕ್ತಿಗೆ ಅನುಗುಣವಾಗಿ ಕಂಡುಕೊಳ್ಳುವ ಸ್ವಾತಂತ್ರ್ಯ ಅವರಿಗಿರಲಿ. ಅದಕ್ಕೆ ಸಹಾಯ ಮಾಡಿ, ಆರೈಕೆ ನೀಡುವುದಷ್ಟೇ ಹೆತ್ತವರ ಕರ್ತವ್ಯ.

೪) ಒತ್ತಡ ಹಾಕುವ ಮೂಲಕ ಕಲಿಕೆ ಪ್ರಗತಿ ಹೊಂದದು; ಬದಲಾಗಿ ಅದಕ್ಕೆ ಹಾನಿಯಾಗುತ್ತದೆ.

೫) ದೈನಂದಿನ ಚಟುವಟಿಕೆ, ದಿನಚರಿ, ನಿಯಮಿತ ಓದು-ಬರಹ ಇವುಗಳನ್ನು ನಡೆಸುವಲ್ಲಿ ಮಕ್ಕಳಿಗೆ ತರಬೇತಿ ನೀಡ ಬೇಕು. ಆದರೆ ಪ್ರೀತಿ, ಅನುನಯಗಳೇ ಇಲ್ಲಿ ಸಹಕಾರಿ; ಒತ್ತಡ-ಬೈಗುಳವಲ್ಲ.

೬) ಮಕ್ಕಳ ಬೆಳವಣಿಗೆ ಹಾಗೂ ಭವಿಷ್ಯಕ್ಕೋಸ್ಕರ ಹೆತ್ತವರು ತುಸು ತ್ಯಾಗ ಮಾಡುವುದಕ್ಕೆ ಸಿದ್ಧರಾಗಿರಬೇಕು. ಮಕ್ಕಳಿಗೆ ಟಿ.ವಿ ನೋಡಬೇಡ, ಮೊಬೈಲ್ ಗೀಳು ಬೇಡ – ಎಂದು ಬೋಧಿಸುವ ಮೊದಲು, ತಾವೇ ಅವುಗಳ ಬಳಕೆಯನ್ನು ಕಡಿಮೆ ಮಾಡ ಬೇಕು.

ಇವು ಕೆಲವು ಅಂಶಗಳು ಮಾತ್ರ. ಸನ್ನಿವೇಶ, ಪರಿಸ್ಥಿತಿಗೆ ಅನು ಗುಣವಾಗಿ ಮಕ್ಕಳ ಹಿತಕ್ಕಾಗಿ ಏನು ಮಾಡಬೇಕೆಂಬುದನ್ನು ಹೆತ್ತ ವರು ನಿರ್ಧರಿಸಬೇಕು. ಎಷ್ಟೋ ಮನೆಗಳಲ್ಲಿ ಹೆತ್ತವರೇ ಉತ್ತಮ ಅಧ್ಯಾಪಕರಾಗಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಾರೆ. ಅಲ್ಲಿ ಪ್ರೀತಿ, ಆಸಕ್ತಿ, ಸಂತಸಗಳಿದ್ದರೆ ಅದರಷ್ಟು ಆರೋಗ್ಯಕರ ಶಿಕ್ಷಣ ಇನ್ನಾವು ದಿದೆ?

## ಸಾಧ್ಯತೆಗಳ ಮುನ್ನೋಟ

ಎಳವೆಯಲ್ಲಿ ಮಕ್ಕಳು ತಮ್ಮ ಬೆಳವಣಿಗೆಯ ಬಗ್ಗೆ ತಾವೇ ಗಮನ ಕೊಡಲಾರರು; ತಮ್ಮ ಶಿಕ್ಷಣದ ಬಗ್ಗೆ ತಾವೇ ಚಿಂತಿಸ ಲಾರರು ಎಂಬುದೇನೋ ನಿಜ. 'ಬಾಲಸ್ತಾವತ್ ಕ್ರೀಡಾಸಕ್ತಃ' ಎಂಬ ಮಾತಿನಂತೆ, ಎಳೆಯ ವಯಸ್ಸಿನಲ್ಲಿ ಆಟೋಟಗಳಲ್ಲೇ

ಆಸಕ್ತಿ ಅಧಿಕ. ಆದರೆ ಜೀವನದಲ್ಲಿ ಎಲ್ಲವೂ ಮುಖ್ಯ, ಎಲ್ಲವೂ ಅಗತ್ಯ ಹಾಗೂ ಎಲ್ಲ ಚಟುವಟಿಕೆಗಳಿಗೂ ಪ್ರಮುಖ ಸ್ಥಾನಗಳಿವೆ ಎಂಬುದನ್ನು ಹಿರಿಯರು ಮನದಟ್ಟು ಮಾಡಿಕೊಡುವುದು ಮುಖ್ಯ. ಕ್ರೀಡೆ, ಸಿನಿಮಾ, ಚಿತ್ರಕಲೆಗಳಲ್ಲಿ ಆಸಕ್ತಿಯಿರುವ ಮಗುವಿಗೆ ಓದು ಆನಂದ ಕೊಡಲಾರದೆ? ಗಣಿತದಲ್ಲಿ ಆಸಕ್ತಿ ಬರಲಾರದೆ? ಖಂಡಿತ ಬಂದೇ ಬರುವುದು. ಮಗುವಿಗೆ ಓದಿನಲ್ಲಿ ಬೇಜಾರು ಬರದಂತೆ, ಆಸಕ್ತಿ ಮೂಡುವಂತೆ ಹಿರಿಯರು ತರಬೇತಿ ಕೊಡಿಸಬೇಕು. ಅದ್ಭುತ ಗಣಿತಜ್ಞರ, ವಿಜ್ಞಾನಿಗಳ ಕಥೆಗಳನ್ನು ಹೇಳಬೇಕು. ಎಲ್ಲ ಅಧ್ಯಯನ ವಿಷಯಗಳಲ್ಲೂ ಸಾರವತ್ತಾದ ಸಂಗತಿಗಳಿವೆ; ಅದನ್ನು ಕಂಡುಕೊಳ್ಳಲು ಹೆತ್ತವರು ಮಕ್ಕಳಿಗೆ ನೆರವಾಗಬೇಕು. ಆಸಕ್ತಿ ಮೂಡಿಸುವಂತೆ ಹೇಳುವ ಕಲೆ ಹೆತ್ತವರಿಗೆ ಸಹಜವಾಗಿ ಬಂದಿರುತ್ತದೆ; ಅದನ್ನು ಪಠ್ಯವಿಷಯಗಳ ಕಡೆಗೂ ಹರಿಸುವುದು ಸಾಧ್ಯ. ಶ್ರೀರಾಮಕೃಷ್ಣರು ಹೇಳುತ್ತಾರೆ: ಮನಸ್ಸು ಬಿಳಿಯ ಶುಭ್ರವಸ್ತ್ರದಂತೆ. ಯಾವುದೇ ಬಣ್ಣವಿಲ್ಲ. ಹತ್ತು ಬಕೆಟ್‌ಗಳಲ್ಲಿ ಹತ್ತು ಬಗೆಯ ಬಣ್ಣದ ನೀರುಗಳಿವೆ. ಯಾವ ಬಣ್ಣದ ನೀರಿನಲ್ಲಿ ಬಟ್ಟೆಯನ್ನು ಅದ್ದಿದರೂ, ಅದು ಆ ಬಣ್ಣವನ್ನು ಪಡೆಯುತ್ತದೆ. ಮಕ್ಕಳ ಮನಸ್ಸಿಗೆ ಈ ಗುಣವಿದೆ. ಅದನ್ನು ಯಾವ ವಿಷಯದಲ್ಲಿ ಇಟ್ಟರೂ, ಅದರಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತದೆ. ಮನಸ್ಸಿಗೆ ಅದರದೇ ಆದ ಆಸಕ್ತಿಯೆಂಬುದಿಲ್ಲ – ಯಾವ ಕಡೆ ಅದನ್ನು ಇಡುತ್ತೀರೋ, ಅದರಲ್ಲಿ ಮಗ್ನವಾಗಿ, ಅದರಲ್ಲಿ ಆಸಕ್ತಿ ಬೆಳೆಸಿಕೊಳ್ಳುತ್ತದೆ. ಆಸಕ್ತಿ ಗಾಢವಾದಂತೆ ಅದು ಪ್ರಿಯವಾಗುತ್ತದೆ, ಅದು ನಿಮ್ಮ ವ್ಯಕ್ತಿತ್ವದ ಭಾಗವೇ ಆಗುತ್ತದೆ. ಕೊನೆಗೆ ಅದೇ ನೀವಾಗುತ್ತೀರಿ! ಇದನ್ನೇ ಮಕ್ಕಳ ಬೆಳವಣಿಗೆ, ವಿದ್ಯಾಭ್ಯಾಸವನ್ನು ಕುರಿತು ಅನ್ವಯಿಸಬೇಕು. ಹೆತ್ತವರು ಈ ವಿಷಯವನ್ನು ಅರಿತುಕೊಂಡಷ್ಟೂ ಮಕ್ಕಳ ತರಬೇತಿಯನ್ನು ಹೆಚ್ಚು ಸಮರ್ಥವಾಗಿ ನಿರ್ವಹಿಸಲು ಸಾಧ್ಯ.

## ವ್ಯಕ್ತಿತ್ವಗಳ ವೈವಿಧ್ಯ

ಮಾನವನ ಮನಸ್ಸುಗಳು ಹೇಗೆ ವೈವಿಧ್ಯಮಯವೋ, ಒಬ್ಬೊಬ್ಬರ ವ್ಯಕ್ತಿತ್ವವೂ ಅಷ್ಟೇ ವೈವಿಧ್ಯಮಯ. ಇದನ್ನು ಅರಿತುಕೊಂಡಲ್ಲದೆ ಬೆಳೆಯುವ ಮಕ್ಕಳ ವ್ಯಕ್ತಿತ್ವವನ್ನು ಸರಿಯಾದ ರೀತಿಯಲ್ಲಿ ಬೆಳೆಸಲಾಗದು. 'ನಮ್ಮ ಮಕ್ಕಳ ಮನಸ್ಸು ನಮಗೆ ಗೊತ್ತಿಲ್ಲವೆ?'' ಎಂದು ಹೆತ್ತವರು ಹೇಳಬಹುದು. ನಿಜ, ತಮ್ಮ ಮಕ್ಕಳ ಬಗ್ಗೆ ಹೆತ್ತವರಿಗಿಂತ ಹೆಚ್ಚು ಇನ್ನು ಯಾರು ತಿಳಿದಿರುತ್ತಾರೆ? ಆದರೂ, ಒಬ್ಬೊಬ್ಬನ ವ್ಯಕ್ತಿತ್ವವೂ ಭಿನ್ನವೆಂಬ ಸತ್ಯವನ್ನು ಅರಿಯದಿದ್ದರೆ 'ಇವನು ಹೀಗೆಯೇ ಬೆಳೆಯಬೇಕು', 'ಅವನಂತೆ ಇವನೂ ಆಗಬೇಕು' ಎಂಬಂತಹ ಭಾವನೆಗಳು ಹೆತ್ತವರ ಮನಸ್ಸಿನಲ್ಲಿ ಬಲವಾಗಿ ನಿಂತುಬಿಡುತ್ತವೆ. ಇತರರೊಡನೆ ಹೋಲಿಸುವಾಗ ನಾವು ಮಾಡುವ ತಪ್ಪು ಇದೇ. ನಮ್ಮ ಮಕ್ಕಳು ಇನ್ನೊಬ್ಬರಂತೆ ಬೆಳೆಯಬೇಕಾಗಿಲ್ಲ. ಒಬ್ಬೊಬ್ಬನ ವ್ಯಕ್ತಿತ್ವ, ಸಾಮರ್ಥ್ಯ, ಒಲವುಗಳು ಬೇರೆಬೇರೆಯಾದ್ದರಿಂದ, ಅವರವರು ಒಂದೊಂದು ಕ್ಷೇತ್ರಗಳಲ್ಲಿ ಮಾಡುವ ಸಾಧನೆಯೂ ಬೇರೆ ಬೇರೆಯಾಗಿರುತ್ತದೆ. ಆದ್ದರಿಂದ ಹೋಲಿಕೆ ಮಾಡುತ್ತ 'ಅವನ ಹಾಗೆ ನೀನೂ ಮುಂದೆ ಸಾಗಬೇಕು' ಎನ್ನುವ ಬದಲು, 'ಚೆನ್ನಾಗಿ ಮಾಡಿದೆ, ಇನ್ನೂ ಚೆನ್ನಾಗಿ ಮಾಡಬಹುದು' ಎಂಬ ಪ್ರೋತ್ಸಾಹದ ಮಾತು ಹೆಚ್ಚು ಪರಿಣಾಮಕಾರಿ.

ಹೆತ್ತವರು ಅಥವಾ ಪಾಲಕರು ಬೆಳೆಯುವ ಮಕ್ಕಳಿಗೆ ನೀಡಬೇಕಾದ ಅತ್ಯಾವಶ್ಯಕವಾದ ಅಂಶಗಳಿವು: ೧) **ಸ್ವಾತಂತ್ರ್ಯ ೨) ಪ್ರೀತಿ, ವಿಶ್ವಾಸ, ೩) ಅವರ ಆಸಕ್ತಿ-ಅಭಿರುಚಿಗಳಿಗೆ ಪ್ರೋತ್ಸಾಹ.** ಇದರೊಂದಿಗೆ, ತಪ್ಪಿದಲ್ಲಿ ತಿದ್ದುವ ಹಾಗೂ ಸರಿ-ತಪ್ಪುಗಳನ್ನು ಮನವರಿಕೆ ಮಾಡಿಕೊಡುವ ಅಗತ್ಯವಂತೂ ಇದ್ದೇ ಇದೆ. ಹಲವು ಸಂದರ್ಭಗಳಲ್ಲಿ ಮಕ್ಕಳ ಪಾಲನೆಗೆ ಅಗತ್ಯವಾದಷ್ಟು ಸಮಯ ನೀಡದಿರುವುದೇ ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಇದನ್ನರಿತು, ಪಾಲಕರು ತಮ್ಮ ಮಕ್ಕಳ ಸರಿಯಾದ ಬೆಳವಣಿಗೆಗೆ ಹೆಚ್ಚಿನ ಗಮನ ಹಾಗೂ ಸಮಯ ನೀಡಬೇಕು.

## ಭವಿಷ್ಯದ ಭರವಸೆ

ಮುಂದೆ ಬೆಳೆಯುವ ಮಕ್ಕಳು ಹೀಗೆಯೇ ಬೆಳೆಯಬೇಕು, ಹೀಗೆ ಆಗಬಾರದು ಎಂದು ಹೆತ್ತವರಾಗಲೀ, ಅಧ್ಯಾಪಕರಾಗಲೀ ನಿರ್ಧರಿಸುವುದು ಸಾಧ್ಯವಿಲ್ಲ ಎಂಬುದು ನಿಜ. ಜೀವನದ ಯಾವುದೋ ಒಂದು ಘಟ್ಟದಲ್ಲಿ ಏನೋ ಒಂದು ಘಟನೆ ಎಲ್ಲವನ್ನೂ ಬದಲಾಯಿಸಬಹುದು. ಆದರೆ ಅವರ ವ್ಯಕ್ತಿತ್ವಗಳನ್ನು ನಿರ್ಮಾಣ ಮಾಡುವಲ್ಲಿ ಹೆತ್ತವರ ಹಾಗೂ ಹಿರಿಯರ ಪಾತ್ರವನ್ನು ಅಲ್ಲಗಳೆಯಲಾಗದು. ಈ ಕಾರಣಕ್ಕಾಗಿ ಹಿರಿಯರು ತಮ್ಮ ಮಕ್ಕಳ ಭವಿಷ್ಯವನ್ನು ಕುರಿತು ಹೆಚ್ಚಿನ ಕಾಳಜಿ ವಹಿಸಬೇಕು. 'ಮಗ ಏನೇ ಆಗಲಿ, ಉತ್ತಮ ವ್ಯಕ್ತಿಯಾಗಿ ಜೀವನ ನಡೆಸಲಿ' ಎಂಬ ಭರವಸೆಯೊಂದಿಗೆ ಎಲ್ಲ ತರಬೇತಿಯನ್ನು ನೀಡಬೇಕು. ಬಾಲ್ಯದಲ್ಲಿ ಕಲಿತ ಪಾಠವನ್ನು ಮಕ್ಕಳು ತಮ್ಮ ಜೀವನದುದ್ದಕ್ಕೂ ನೆನಪಿನಲ್ಲಿಟ್ಟುಕೊಳ್ಳುತ್ತವೆ. ಆದ್ದರಿಂದ ಆ ವಯಸ್ಸಿನಲ್ಲಿ ಹಿರಿಯರು ಅವರ ಮೇಲೆ ಮೂಡಿಸುವ ಪ್ರಭಾವ ಅತ್ಯಂತ ಉತ್ತಮ ಮಟ್ಟದ್ದಾಗಿರಬೇಕು; ಶ್ರೇಷ್ಠ ಆದರ್ಶಗಳಿಂದ ಕೂಡಿದ್ದಾಗಿರಬೇಕು. ಮುಂದಿನ ಪೀಳಿಗೆಯ ಹಿತಕ್ಕಾಗಿ ಇದನ್ನು ಮಾಡುವುದು ಒಂದು ಮಹತ್ಕಾರ್ಯವೂ ಆಗುವುದರಲ್ಲಿ ಸಂದೇಹವಿಲ್ಲ. ✱

### ಮಾರ್ಚ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೬ | ಬುಧವಾರ | ಏಕಾದಶಿ |
| ೮ | ಶುಕ್ರವಾರ | ಮಹಾಶಿವರಾತ್ರಿ |
| ೧೨ | ಮಂಗಳವಾರ | ಭಗವಾನ್ ಶ್ರೀರಾಮಕೃಷ್ಣ ಪರಮಹಂಸ ಜಯಂತಿ |
| ೨೦ | ಬುಧವಾರ | ಏಕಾದಶಿ |
| ೨೫ | ಸೋಮವಾರ | ಶ್ರೀ ಚೈತನ್ಯ ಜಯಂತಿ |
| ೨೯ | ಶುಕ್ರವಾರ | ಸ್ವಾಮಿ ಯೋಗಾನಂದ ಜಯಂತಿ |